# <u>ಜಗನ್ಮಾತೆ, ವಿಶ್ವಗುರು, ಜಗಜ್ಯೋತಿ, ವೈರಾಗ್ಯನಿಧಿ ಅಕ್ಕಮಹಾದೇವಿಯವರು</u>

## <u>ಅಕ್ಕಮಹಾದೇವಿಯವರ: ಸಂಕ್ಷಿಪ್ತ ಪರಿಚಯ</u>

**ಜನನ: ಕ್ರಿ.ಶ. 1130 / 1160 (ಹನ್ನೆರಡನೆಯ ಶತಮಾನ)**
**ಜನ್ಮಸ್ಥಳ: ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ಮತ್ತು ಶಿರಾಳಕೊಪ್ಪದ ನಡುವೆ ಇರುವ ಉಡುತಡಿ (ಉಡಗಣಿ).**
**ಹೆತ್ತವರು: ಸುಮತಿ ಮತ್ತು ನಿರ್ಮಲಶೆಟ್ಟಿ (ಕೆಲವು ಕಡೆ ಲಿಂಗಮ್ಮ ಮತ್ತು ಓಂಕಾರಶೆಟ್ಟಿ ಎಂದೂ ಉಲ್ಲೇಖವಿದೆ. ಆದರೆ, ತಂದೆ-ತಾಯಿಯರ ಹೆಸರು ಕವಿ ಕಲ್ಪನೆ ಇರಬಹುದು ಎನ್ನುವುದು ಕೆಲವು ವಿದ್ವಾಂಸರ ಅನುಮಾನ).**

ಅಂಕಿತನಾಮ: ಚೆನ್ನಮಲ್ಲಿಕಾರ್ಜುನ
ಐಕ್ಯಸ್ಥಳ: ಶ್ರೀಶೈಲದ ಕದಳಿವನದ ಗುಹೆ
ಪ್ರಮುಖ ಕೃತಿಗಳು: ಯೋಗಾಂಗತ್ರಿವಿಧಿ, ಸೃಷ್ಟಿಯ ವಚನ, ಮಂತ್ರಗೋಪ್ಯ ಮತ್ತು ಇತರ ವಚನಗಳು.

**ಜೀವನ ಮತ್ತು ವ್ಯಕ್ತಿತ್ವ**
**ಅಕ್ಕಮಹಾದೇವಿಯವರು ವಚನ ಸಾಹಿತ್ಯದ ಪ್ರಮುಖರಲ್ಲೊಬ್ಬರು ಹಾಗೂ ವಿಶ್ವದ ಪ್ರಥಮ ಮಹಿಳಾ ಕವಯತ್ರಿಯರಲ್ಲಿ ಒಬ್ಬರಾಗಿದ್ದಾರೆ. ಇವರನ್ನು ಶರಣ ಚಳುವಳಿಯ ಪ್ರಮುಖರಾಗಿ, ಸ್ವಾಭಿಮಾನದ ಪ್ರತೀಕವಾಗಿ, ಸ್ತ್ರೀವಾದಿ ಚಳವಳಿಯ ನಿಜವಾದ ಪ್ರತಿಪಾದಕಿಯಾಗಿ ಮತ್ತು ಎಲ್ಲರಿಗೂ 'ಅಕ್ಕ'ನಾಗಿ ಗುರುತಿಸಬಹುದಾಗಿದೆ.**

**ಚಿಕ್ಕ ವಯಸ್ಸಿನಲ್ಲೇ ಸಕಲ ಸುಖವನ್ನು ತ್ಯಜಿಸಿದ ಅಕ್ಕ ಎದುರಿಸಿದ ಪರೀಕ್ಷೆಗಳು ಬಹಳಷ್ಟು. ಸಾಕ್ಷಾತ್ ಶಿವನನ್ನೇ (ಚೆನ್ನಮಲ್ಲಿಕಾರ್ಜುನ) ಪತಿ ಎಂದು ಸ್ವೀಕರಿಸಿ, ಲೌಕಿಕ ಜಗತ್ತನ್ನು ಧಿಕ್ಕರಿಸಿ, ಕೇಶಾಂಬರೆಯಾಗಿ ನಡೆದ ಅಕ್ಕನವರು ಹಲವಾರು ಭಕ್ತರಿಗೆ ಮಾದರಿಯಾಗಿದ್ದಾರೆ.**

**ಹರಿಹರನ 'ಮಹಾದೇವಿಯಕ್ಕಗಳ ರಗಳೆ'ಯ ಪ್ರಕಾರ, ಆ ಊರಿನ ರಾಜನಾದ ಕೌಶಿಕನು ಮಹಾದೇವಿಯವರನ್ನು ಮದುವೆಯಾಗಲು ಬಯಸಿ ಒತ್ತಾಯಿಸಿದನು. ಅಕ್ಕ ಕೆಲವು ಶರತ್ತುಗಳನ್ನು ವಿಧಿಸಿ ಮದುವೆಗೆ ಒಪ್ಪಿದರೂ, ಕೌಶಿಕನು ವಚನ ಭಂಗ ಮಾಡಿದಾಗ ತಾನು ಉಟ್ಟಿದ್ದ ಉಡುಗೆಯನ್ನೂ ತೊರೆದು ಮನೆ ಬಿಟ್ಟು ಹೊರಟುಬಿಡುತ್ತಾರೆ. ಇನ್ನು ಕೆಲವು ಕಥನ ಪರಂಪರೆಗಳಲ್ಲಿ ಮತ್ತು ವಚನಗಳ ಆಧಾರಗಳ ಪ್ರಕಾರ, ಅಕ್ಕ ಎಳವೆಯಲ್ಲೇ ಚೆನ್ನಮಲ್ಲಿಕಾರ್ಜುನನನ್ನು ಮನಸಾರೆ ವರಿಸಿದ್ದರು ಎನ್ನಲಾಗುತ್ತದೆ.**

'ಯೋಗಾಂಗತ್ರಿವಿಧಿ' ಕೃತಿಯ ವಿಶ್ಲೇಷಣೆ

೧೨ನೇ ಶತಮಾನದ ಮಹಾನುಭಾವಿ, ಶಿವಯೋಗಿನಿ ಅಕ್ಕಮಹಾದೇವಿಯವರು ರಚಿಸಿದ 'ಯೋಗಾಂಗ ತ್ರಿವಿಧಿ'ಯು ಶಿವಯೋಗ ಸಾಧನೆಯ ವಿವಿಧ ಹಂತಗಳ ಸೂತ್ರೀಕರಣದಂತಿದೆ. ಇದನ್ನು ವಿಶ್ಲೇಷಿಸುವುದು ಅಷ್ಟು ಸುಲಭವಲ್ಲ; ಆ ಅಧ್ಯಾತ್ಮದ ಎತ್ತರಕ್ಕೆ ಏರಿದವರಿಗಷ್ಟೇ ಅದು ಸಾಧ್ಯವಾಗುವ ಸಿದ್ಧಿಯಾಗಿದೆ. ಅಂತರಂಗ ಮತ್ತು ಬಹಿರಂಗಗಳ ಮಧ್ಯೆ ಇರುವ ಗದ್ದಲವನ್ನು ಅಡಗಿಸಿ, ಯಾವುದೇ ಗೊಂದಲವಿಲ್ಲದ ಅನನ್ಯವಾದ ಆ 'ಶೂನ್ಯ'ದ ಅನುಭಾವವನ್ನು ಇದು ಒಳಗೊಂಡಿದೆ. ಅಕ್ಕಮಹಾದೇವಿಯವರ ಪ್ರಚಲಿತವಿರುವ ವಚನಗಳನ್ನಷ್ಟೇ ಓದಿಕೊಂಡಿರುವವರಿಗೆ, ಈ 'ಯೋಗಾಂಗ ತ್ರಿವಿಧಿ'ಯು ಅವರ ಅಧ್ಯಾತ್ಮಿಕ ವಿಕಸನದ ಹೊಸ ಅನುಭವವನ್ನು ನೀಡುತ್ತದೆ. ಇದೊಂದು ಸಂಕ್ಷಿಪ್ತ ಕೃತಿಯಾಗಿದ್ದರೂ, ಇದನ್ನು ಗಮನವಿಟ್ಟು ಓದಿದಾಗ ವಚನ ವಾಙ್ಮಯದ ಹಿನ್ನೆಲೆಯಲ್ಲಿ ಮತ್ತು ಇಡೀ ಭಾರತೀಯ ದಾರ್ಶನಿಕ ಭಿತ್ತಿಯಲ್ಲಿ ಅಕ್ಕನವರ ಯೌಗಿಕ ಹಾಗೂ ಅನುಭಾವಿ ದರ್ಶನ ಎಷ್ಟು ವಿಶಿಷ್ಟವಾದುದೆಂದು ಗುರುತಿಸಬಹುದು.

ಅಭಿವ್ಯಕ್ತಿಯ ಶೈಲಿ: ಯೋಗಾಂಗ ತ್ರಿವಿಧಿಯಲ್ಲಿ ಅಕ್ಕ ಬಳಸಿರುವ ಭಾಷೆ ಎಲ್ಲ ತತ್ವಪದಗಳಲ್ಲಿರುವಂತೆ ನೇರ ಮತ್ತು ಬೆಡಗಿನ (ಗೂಢಾರ್ಥದ) ಶೈಲಿಗಳ ಮಿಶ್ರಣವಾಗಿದೆ. ಕೆಲವು ಸಲ ಅರ್ಥಗಳು ಸ್ವಯಂಪ್ರಕಾಶವಾಗಿ ಬೆಳಗಿದರೆ, ಇನ್ನು ಕೆಲವು ಸಲ ಸಂಕೇತಗಳ ಬಳಕೆಯಿಂದ ಗೂಢವಾಗಿ ನಮ್ಮನ್ನು ತಲುಪುತ್ತವೆ. ಇಷ್ಟಾದರೂ ಯೋಗಸಾಧನೆಯ ಬಗ್ಗೆ ಒಂದು ಸ್ಪಷ್ಟವಾದ, ಸುವ್ಯವಸ್ಥಿತವಾದ ಗ್ರಹಿಕೆಯನ್ನು ಈ ಕೃತಿ ಮಂಡಿಸುತ್ತದೆ."ಯೋಗಾಂಗ ತ್ರಿವಿಧಿ"ಯು ಸಂಸ್ಕೃತದ ಶಾಸ್ತ್ರಗ್ರಂಥಗಳ ಮಾದರಿಗೆ ಹೊರತಾಗಿಯೂ ಒಂದು ಸ್ವತಂತ್ರ ಶಾಸ್ತ್ರರಚನೆಯಾಗಿದೆ. ವಿಶೇಷವೆಂದರೆ, ಇಂಥದ್ದೊಂದು ಗಹನವಾದ ಶಾಸ್ತ್ರಗ್ರಂಥದಲ್ಲೂ ಹಲವೆಡೆ ಅಕ್ಕನವರ ಕಾವ್ಯಪ್ರತಿಭೆ ಮಿಂಚುತ್ತದೆ. ಉದಾಹರಣೆಗೆ ಈ ತ್ರಿಪದಿಯನ್ನು ಗಮನಿಸಬಹುದು:
"ಮಾಗಮಾಸವು ಪೋಗಿ ಮೇಗೆ ಬಂದಿತು ಚೈತ್ರ |
ಬೇಗ ಮಾಮರನು ತಳಿರಿತ್ತು, ಅದ ಕಂಡು |
ಕೂಗಿ ಕರೆದಿತ್ತು ಕಳಕಂಠ ||"
ಅಕ್ಕನವರ ಕಾವ್ಯಾತ್ಮಕ ವಚನಗಳನ್ನು ಕೇವಲ ಮೇಲ್ನೋಟಕ್ಕೆ ತಾತ್ಪರ್ಯಗೊಳಿಸುವುದು ಕಷ್ಟ. ಅವುಗಳನ್ನು ಹಾಗೇ ಸವಿದು, ಅರ್ಥಗಳನ್ನು ನಮ್ಮೊಳಗಿಳಿಸಿಕೊಳ್ಳಬೇಕು.

ಶ್ರೀ ಮಹಾಮಹಿಮನೆ | ಸೋಮಶೇಖರ ಗುರುವೆ
ಕಾಮಿತದ ಫಲವ ಕೊಡು ಕಂಡಾ | ಎನ್ನ ಹೃ
ದ್ಧಾಮದೊಳು ನಿಂತು ಮರೆ ಕಂಡ || 1 ||

ಮೊದಲು ಮಾಡುವೆ ನಾನು | ಸದಮಲ ಗುರುವಿನ
ಮೃದುಪಾದಗಳನು ಬಲಗೊಂಡು | ತತ್ವದ
ಚದುರ ಪದಗಳನು ಮುದದಿಂದ || 2 ||

ಜೀವ - ಪರಮರ ಭೇದ | ಭಾವವನರಿವೊಡೆ

ಆವಾವ ಮುಖದೊಳಿರುವುದು | ಯೆನ್ನಯ
ಭಾವಕ್ಕೆ ಬಂದುದನೊರೆವೆ || 3 ||

ಶರಣರ ನೆಲೆಗಳನರಿವಡೆನ್ನ ಅಳವೆ
ಹರಿಯಜ ಸುರರಿಗಳವಲ್ಲ | ವೆಂದೆನ
ಲೊರೆವೆ ನಾನವರ ಕೃಪೆಯಿಂದ || 4 ||

ಎಲ್ಲ ದೇವರ ದೇವ | ವಲ್ಲಭನೆ ಗುರು ಚೆನ್ನ
ಮಲ್ಲಿಕಾರ್ಜುನನೆ ಮನದೊಳು | ಇರು ಕಂಡ
ಬಲ್ಲಂತೆ ನಿಮ್ಮ ಸ್ತುತಿಸುವೆನು || 5 ||

ಆರು ಭೂತಂಗಳಲ್ಲಿ ಆರು ತತ್ವಗಳಲ್ಲಿ
ಪೂರೈಸಿಯಿರ್ಪ ಘನವನ್ನು | ಮನದಲ್ಲಿ
ಆರೈದು ತಿಳಿದಡವ ಮುಕ್ತ || 6 ||

ಮಾಘಮಾಸವು ಪೋಗಿ ಮೇಗೇ ಬಂದಿತು ಚೈತ್ರ
ಬೇಗ ಮಾಮರನು ತಳಿರಿತು | ಅದ ಕಂಡು
ಕೂಗಿ ಕರೆದಿತ್ತು  ಕಳಕಂಠ || 7 ||

ಆಕಾಶದೊಳಗಣ  ಜೋಡಿಕೆಯ ಪ್ರಭೆ ಬಂದು
ಲೋಕಂಗಳೊಳಗೆ ಮುಸುಕಲು | ಅದ ಕಂಡು
ಏಕಾಂಗಿಯಾದಡವ ಯೋಗಿ || 8 ||

ಒಂಬತ್ತು ವೆಜ್ಜದ ತುಂಬಿದ ಕೊಡನೊಳು
ಸಂಭ್ರಮದ ಮುತ್ತು ಇರುತಿಹುದು | ಅದರನುವ
ನಂಬಿ ಕಂಡವನೆ  ಕಡು ಜಾಣ || 9 ||

ಅಷ್ಟದಳ ಕಮಲದ | ಬಟ್ಟಬಯಲೊಳಗೊಂದು
ಮುಟ್ಟಬಾರದ ಘನವಿಹುದು | ಮನದೊಳಗೆ
ದೃಷ್ಟಿಯಿಟ್ಟವನೆ ಕಡುಜಾಣ  || 10 ||

ಕೋಡಗನೊಡಗೂಡಿ | ಯಾಡುವ ನರಿ ನಾಯಿ
ಗೀಡಾದ ಮನೆಯ ಮುರಿದಿಹೆನು| ಮತ್ತೊಂದು
ಗೂಡಿನೊಳು ನಾನು ಮೆರೆದಿಹೆನು || 11 ||

ಒಡಹುಟ್ಟಿದೈವರ | ಒಡನೆ ಶಿರಗಳನರಿದು
ಮಡದಿಯ ಕರವ ಹಿಡಿದಿಹೆನು | ಮುಂದಣ
ನಡುಬಟ್ಟೆಯೊಳಗೆ ನಡೆದಿಹೆನು || 12 ||

ನುಡಿಯಬಾರದು ಹಣ್ಣು ಕಡೆಯೊಳಗಿರಲಾಗಿ
ಮಡದಿ ತಾನೊರ್ವಳದ ಕಂಡು ಗ್ರಹಿಸಲ್ಕೆ
ನುಡಿಯೊಳಗಾಗಿ ಮೆರೆಯಿತ್ತು || 13 ||

ಕಂಗಳ ನೋಟದಿ ಕರಗಿತೆನ್ನಯ ಮನವು
ತಿಂಗಳ ಸೂಡಿದಭವನೆ | ನೀನೀಗ
ಹಿಂಗದಲೆನಗೆ ದಯವಾಗೋ ||14 ||

ನೂರೆಂಟು ಮಣಿಗಳ | ಮೂರು ಭಾಗವ ಮಾಡಿ
ಮೂರು ಪುರುಷರಿಗೆ ಅಳವಡಿಸಿ | ಮೂವರನು
ಸೇರಿ ನಾನಳಿದು ಬಯಲಾದೆ || 15 ||

ಒಂದು ರತ್ನವು ತಾನು ಮುಂದೆ ಈರಾರಾಗಿ
ಕುಂದದೈವತ್ತು ತೆರನಾದ | ರತ್ನವುದು
ಸಂದಿತು ಎನ್ನ ಮನದೊಳು || 16 ||

ಊರೊಳಗೆ ಆಡುವ | ಮಾರಿಯ ಹಿಡಿತಂದು
ಭಾರಿಕೋಳವನಳವಡಿಸಿ| ಆ ಪುರ
ಮಾರಿದೆನು. ಒಬ್ಬ ಚದುರಂಗೆ || 17 ||

ಕೋಟಿ ರವಿಶಶಿಗಳಿಗೆ ಮೀಟಿದ ಪ್ರಭೆ ಬಂದು
ನಾಟಿತ್ತು ಎನ್ನ ಮನದೊಳಗೆ | ಅದ ಕಂಡು
ದಾಟಿದೆನು ಭವದ ಕುಣಿಗಳನು || 18 ||

ಅಂಬರದೊಳಗಣ | ತುಂಬಿದ ಕೊಡನುಕ್ಕಿ
ಕುಂಭಿನಿಯ ಮೇಲೆ ಸುರಿಯಲು | ಮಾನವರು
ಸಾಂಬಲೋಕ ತೆರಳಿದರು || 19 ||

ಮೊರೆವ ನಾದವ ಕೇಳಿ ಉರಿವ ಜ್ಯೋತಿಯ ನೋಡಿ
ಸುರಿವಮೃತವನು ಸವಿದುಂಡ | ಕಾರಣ

ತೊರೆದನೋ  ಜನನ ಮರಣಗಳ  || 20 ||

ಅಷ್ಟದಿಕ್ಕಲಿ ಶಕ್ತಿ | ಅಷ್ಟರುದ್ರರು ಮೂರ್ತಿ
ಅಷ್ಟದಿಕ್ಪಾಲಾರಾದಿಗಳ | ನಡುವಿರ್ದ
ಕಟ್ಟಾಣಿ ಮುತ್ತ ಬರಸೆಳೆದೆ  || 21 ||

ಒಂಬತ್ತು ವೆಜ್ಜದ | ಇಂಬುಗಳ ಬಲಿವೃತ್ತ
ತುಂಬಿ ಸುಷುಮ್ನೆಯೋಳು ಘನವ | ನೋಡಲ್ಕೆ
ಕುಂಭದೊಳಮೃತ ಸುರಿಯಿತ್ತು || 22 ||

ಆರು ಮುಖದ ಮುತ್ತ  | ನೀರೊಳಗಿರಿಸಲ್ಕೆ
ನೀರಳಿದು ಮುತ್ತು ಉಳಿಯಿತು | ಆ ಮುತ್ತ
ಸೇರಿಸಿದೆನ್ನೆನ್ನ ಉರದಲ್ಲಿ   || 23 ||

ಉಪ್ಪರ ಗುಡಿ ಮೇಲೆ ಸರ್ಪನು ಹೆಡೆಯೆತ್ತಿ
ಎಪ್ಪತ್ತು ಪುರವನಗಿದುಂಡು | ದಣಿಯದೆ
ಕಪ್ಪೆಯ ಶಿರವ ಮುರಿಯಿತ್ತು || 24 ||

ಹಿತ್ತಲ ಬಾಗಿಲ ತೆರೆದು ಸತ್ತಾತನ ಎಚ್ಚರಿಸಿ
ಹೆತ್ತಮ್ಮನ ಕರೆವ ಪಿಡಿಯಲ್ಕೆ| ಅವಳೀಗ
ಇತ್ತಳೈ ತನ್ನ ಪದಕವ || 25 ||

ಕೋಣನ ಕೊಂಬಿನ ಮೇಲೆ  |  ಮಾಣದೆಲೆ ಕಪಿಯೇರಿ
ಜಾಣೆಯ ಮನೆಯೊಳಹೊಗಲು | ಅವಳಿದ್ದು
ಕೋಣನ ಕಾಲ ಮುರಿದಿಹಳು || 26 ||

ಹೇಮಕೂಟದ ತುದಿಗೆ | ಆ ಮಹಾಗಜವೇರಿ
ಸೋಮನ ಕಳೆಯ ಸವಿದುಂಡು | ಮದವೇರಿ
ಕಾಮನ ಪಿಡಿದು ಬಡಿಯಿತ್ತು || 27 ||

ಪಶ್ಚಿಮದ ಕೊಳದಲ್ಲಿ ಅಚ್ಚ ತಾವರೆಯರಳಿ
ನಿಶ್ಚಳದ ಗಂಧವೆಸೆಯಲ್ಕೆ| ಅದ ಕಂಡು

ಸಚ್ಚಿತ್ತ  ಭ್ರಮರವೆರಗಿತ್ತು || 28 ||

ನವಪುರದೊಳಗೊಂದು  |  ನವರತ್ನ ಬೆಲೆಯಾಗೆ
ನವನಾರಿಯರು ಅದ ಕಂಡು | ಕೊಳಲಾಗಿ
ಭವಸೂತ್ರ  ಹರಿದು ಬಯಲಾದೆ  || 29 ||

ಬೆಟ್ಟದ ಮೇಲ್ಗಿಚ್ಚು | ಸುಟ್ಟಿತ್ತು ಕಾನನವ
ಅಷ್ಟಮೃಗಜಾತಿಯಳಿದವು | ಅದ ಕಂಡು
ಬಟ್ಟಬಯಲೊಳಗೆ ಮೆರೆದೆನು || 30 ||

ಕೊಂಡಕ್ಕೆ ಬೀಳ್ವಂಥ ಲಂಡಸ್ತ್ರೀಯಳು ತಾನು
ದಂಡೆಯ ಕುಣಿಕೆ ಸಡಿಲಿಸಲು | ಕೊಂಡದ
ಕೆಂಡದೊಳಗಾಗಿ ಮುಳುಗಿದಳು || 31 ||

ಕುಂಡಲಿಯ ಸರ್ಪನ  ತುಂಡ ಮೇಲಕೆ ನೆಗೆಯೆ
ಮಂಡಲವು ಮೂರು ಬೆಳಗಾಗಿ | ಉರಿಯುವ–
ಖಂಡಜ್ಯೋತಿಯೊಳು ಬಯಲಾದೆ || 32 ||

ಅಷ್ಟಾವರಣದ ಹಣ್ಣು ಬಟ್ಟಬಯಲೊಳಗಿರಲು
ಅಷ್ಟಾಂಗಯೋಗವನು ಮಾಡಿ | ಬಳಲುವರು
ದೃಷ್ಟಿಯೊಳಗಿರುವುದನು ಮರೆತು  || 33 ||

ನೆಲ ನಿಲ್ಲ  ತೋಟದಲಿ | ಎಲೆಯಿಲ್ಲ ಗಿಡ ಹುಟ್ಟಿ
ಫಲವಿಲ್ಲ ಹಣ್ಣು ಕೆಡೆದರಲು | ಅದ ಕಂಡು
ಮೆಲಲಿಲ್ಲ ಹೋಗಿ ಸವಿದಿಹೆನು || 34 ||

ಸಪ್ತಸಾಗರ ಬತ್ತಿ  |  ಹತ್ತು ಹಂಸೆಯು ಸತ್ತು
ಮುತ್ತು ಮಾಣಿಕವು ತಲೆದೋರೆ | ಅದಕಂಡು
ಸತ್ತವನು ಎದ್ದು ಕುಣಿದ  || 35 ||

ಹತ್ತು ಸಾಗರದಲ್ಲಿ ಮತ್ತೆ ಸ್ನಾನವ ಮಾಡಿ
ಮತ್ತೊಂದು ತೆರದ ಉಣಿಸುಗಳ | ನಾನುಂಡು
ಕತ್ತಲೆಯಳಿದು ಬೆಳಗಾದೆ  || 36 ||

ಕರ್ತೃ ಶ್ರೀಗುರುರಾಯ ಮುತ್ತಿನ ಕವಚವ
ಅರ್ತಿಯಿಂದೆನಗೆ ಅಳವಡಿಸೆ | ಅದರಿಂದ
ಕಿತ್ತೆನು ಮಾಯಾಬಲೆಗಳನು || 37 ||

ನಡೆವೆ ಲಿಂಗದ ಕೂಡೆ | ನುಡಿವೆ ಲಿಂಗದ ಕೂಡೆ
ಎಡವಿಡದೆ ಬರ್ಪ ವಿಷಯಾದಿ | ಭೋಗವ
ನೂಡುವೆ ಲಿಂಗಮುಖಗಳ್ಗೆ|| 38 ||

ಒಂಬತ್ತು ಚೌಕದ ಉಂಬುಡುವ ಮನೆಯನ್ನು
ನಂಬದಲೆ ಕಡೆಗೆ ತೊಡಗಿಸಿ | ಮುಂದಣ
ಸಂಭ್ರಮದ ಮನೆಗೆ ನಡೆದೆನು. || 39 ||

ಗುರುವೆ ನನ್ನಯ ಕಾಯ | ಹರನೆನ್ನಯ ಮನವು
ಪರಮ ಜಂಗಮವೆ ಅನುಭಾವ | ಮುಖವೆನ್ನ
ಇರವೆಲ್ಲ ಲಿಂಗಮಯವೆಂಬೆ || 40 ||

ಉಟ್ಟ ಸೀರೆಯ ಸೀಳಿ | ತೊಟ್ಟ ತೊಡಿಗೆಯ ಮುರಿದು
ಬಿಟ್ಟೆಹೆನು ನಾನು ಬಿಡುಮುಡಿಯ | ಎಲೆ ದೇವ
ಕೊಟ್ಟೆಹೆನೆನ್ನ ತನುಮನವ || 41 ||

ಷಡಚಕ್ರದೊಳಗಣ | ಷಡುವಿಧ ಲಿಂಗಕ್ಕೆ
ಷಡುವಿಧೇಂದ್ರಿಯವ | ಮುಖಮಾಡಿ ವಿಷಯಗಳ
ಷಡುಭಕ್ತಿಯಿಂದಲೂಡುತಿಹೆನು || 42 ||

ಆಧಾರದೊಳಗಣ | ಆದಿಯ ಲಿಂಗಕ್ಕೆ
ಮೇದಿನಿಯ ಘ್ರಾಣಮುಖಮಾಡಿ | ಗಂಧವನು
ಮೋದದಿಂದ ಕೊಡುವ ಸದ್ಭಕ್ತ || 43 ||

ಆರೆಸಳ ಕಮಲದ ಕರ್ತೃ ಗುರು ಲಿಂಗಕ್ಕೆ
ಸಾರಜಿಹ್ವೆಯನು ಮುಖಮಾಡಿ | ರಸಗಳ
ಪೂರೈಸಿಕೊಡುವ ನಿಜನಿಷ್ಠ || 44 ||

ಹತ್ತೆಸಳ ಕಮಲದ | ಕರ್ತೃಶಿವಲಿಂಗಕ್ಕೆ
ಮತ್ತೆ ನೇತ್ರಗಳ ಮುಖಮಾಡಿ | ರೂಪಿನ
ತುತ್ತುಗಳ ಕೊಡುವನವಧಾನಿ || 45 ||

ದ್ವಾದಶದಳ ಕಮಲದ ಲಾದ ಚರಲಿಂಗಕೆ
ಸಾದರದಿ ತ್ವಕ್ಕ ಮುಖಮಾಡಿ | ಸ್ಪರುಶನದಿ
ಸ್ವಾದವನು ಕೊಡುವನನುಭಾವಿ || 46 ||

ಷೋಡಶ ಕಮಲದ | ಲಾಡುವ ಲಿಂಗಕ್ಕೆ
ಗಾಢದಿಂ ಶ್ರೋತ್ರಮುಖಮಾಡಿ | ಶಬ್ದವನು
ನೀಡಿ ಕೊಡುತಿರ್ಪ ಪರಿಣಾಮಿ.|| 47 ||

ದ್ವಿದಳತ್ರಿಕೂಟದಲಿ | ಹುದುಗಿದ ಮಹಲಿಂಗಕ್ಕೆ
ಸದಮಲ ಹೃದಯಮುಖಮಾಡಿ | ತೃಪ್ತಿಯನು
ಒದಗಿ ಕೊಡುತಿಹನು ಸಮರಸನು || 48 ||

ಅಂಗದಾಶೆಯನಳಿದು ಲಿಂಗದಾಶೆಯವುಳಿದು
ಸಂಗಸುಧೆಯನೇ ನಲಿದುಂಡು | ತನುಮನದ
ಭಂಗವನು ಹರಿದು ಸುಖಿಯಾದೆ || 49 ||

ಗುರು ನಿಮ್ಮ ಚರಣವ | ಮರೆಯೆನು, ಮರೆದಡೆ
ಪರಿಭವದ ಬಾಧೆ ಬರಲಯ್ಯ | ಕಡೆಯಲ್ಲಿ
ದೊರೆಯೆ ನರಕದೊಳು ತುಳಿಯಯ್ಯ || 50 ||

ನಡೆವಲ್ಲಿ ನುಡಿವಲ್ಲಿ | ಉಡುವಲ್ಲಿ ಉಂಬಲ್ಲಿ
ಬಿಡೆನಯ್ಯ ನಿಮ್ಮ ಚರಣವನು | ಈ ಛಲವ
ಕಡೆಮುಟ್ಟಿಸೆನಗೆ ಗುರುರಾಯ || 51 ||

ಘನಗುರುವೆ ನೀಯೆನ್ನ | ಮನದೊಳಗಿರು ಕಂಡ
ಮನವ ಬಿಟ್ಟನಿಯ ಅಗಲಿದರೆ | ನಿಮಗಿನ್ನು

ಅನಘಶಿವಶರಣರಡಿಯಾಣೆ || 52 ||

ಆವಾವ ಭೋಗಗಳ | ಜೀವಭಾವದಿ ನಾನು
ಭಾವಿಸುತ ಪಿರಿದು ಸವಿದರೆ | ನರಕದ
ಬಾವಿಯೊಳಗದ್ದಿ ತೆಗೆಯಯ್ಯ || 53 ||

ಗುರು ಕೊಟ್ಟ ಭೋಗವನು | ಗುರುವಿಗೆ ನಾನಿತ್ತು
ಗುರುಮುಖದಿಂದ ಒದಗಿದ | ಶೇಷವನು
ಅರಿವಿಂದ ಉಂಡು ಸುಖಿಯಾದೆ || 54 ||

ಲಿಂಗವು ಬಂದೆನ್ನ ಅಂಗದೊಳು ನೆಲಸಲು
ಸಂಗದೊಳ್ ಜ್ಯೋತಿರೂಪಾದ ಕಾರಣದಿ
ಇಂಗಿದವು ಎನ್ನ ಭವಭವವು || 55 ||

ಎಲ್ಲ ಭೋಗಗಳಲ್ಲಿ | ಪಲ್ಲವಿಸಿ ಇರುತಿಹರು
ಬಲ್ಲಡೆ ಅವರ ಪರಿ ಬೇರೆ | ಶರಣರ
ಖುಲ್ಲಮಾನವರು ಜರಿವರು || 56 ||

ಬಲ್ಲವರೆ ಬಲ್ಲರು | ಎಲ್ಲರಿಗೆ ತಿಳಿಯದು
ಕಲ್ಲೊಳು ಮಿಸುನಿಯಿರುವಂತೆ | ಇದರನುವ
ಬಲ್ಲವರಿಗರ್ಥ ತಿಳಿಯುವುದು || 57 ||

ನಾನಾ ಜನ್ಮಗಳಲ್ಲಿ | ಹೀನಳಾಗಿರುತಿರಲು
ನೀನೆ ಬಂದೆನ್ನ ಕೈಪಿಡಿದ | ಕಾರಣದಿ
ಮೌನಮುದ್ರಿಯೊಳೊಡವೆರೆದೆ || 58 ||

ಹಿಂದಣ ಭವವೆಲ್ಲ | ಸಂದಿಹವಿಲ್ಲಿಗೆ
ಮುಂದಿನ್ನು ನನಗೆ ಭವವಿಲ್ಲ | ಗುರುರಾಯ
ಹೊಂದಿದೆನು ನಿಮ್ಮ ಚರಣವ || 59 ||

ಎನ್ನ ಕಾಯವೆ ಗುರು | ಎನ್ನ ಪ್ರಾಣವೆ ಲಿಂಗ
ಎನ್ನಂತರಾತ್ಮ ಚರಲಿಂಗ | ವಾಗಲು
ಇನ್ನುಂಟೆ ಎನಗೆ ತನುಮನವು || 60 ||

ನಲೆ ನಲ್ಲನ ಸುಖವ | ನೆಲ್ಲರೊಳುರುಹುವಳೆ
ಬಲ್ಲವರದರ ತೆರದೊಳು | ನಿಜತೃಪ್ತಿ
ಸಲ್ಲೀಲೆಯಿಂದ ಘಟಿಸುವುದು. || 61 ||

ಚೆನ್ನ– ಬಣ್ಣಗಳಂತೆ ರನ್ನ ದೀಪ್ತಿಗಳಂತೆ
ಭಿನ್ನವಿಲ್ಲದಲೆ ಬೆರದಿಹರು | ಲಿಂಗದೊಳು
ಪನ್ನಗಧರನ ಶರಣರು || 62 ||

ನಿಮ್ಮ ತೊತ್ತಿನ ತೊತ್ತು | ನಿಮ್ಮ ಭೃತ್ಯನ ಭೃತ್ಯೆ
ನಿಮ್ಮಡಿಯ ನಾನು ಮರೆವೊಕ್ಕೆ| ಘನಗುರುವೆ
ನಿಮ್ಮ ಕೃಪೆಯಿಂದ ಸಲಹಯ್ಯ || 63 ||

ಭಕ್ತರ ಮನೆಯಲ್ಲಿ | ತೊತ್ತಾಗಿ ಇರಿಸೆನ್ನ
ಭಕ್ತರುಂಡುಳಿಂದ ವರಶೇಷ | ವನು ಕೊಂಬ
ನಿತ್ಯಸುಖವೆನಗೆ ಕೊಡು ಗುರುವೆ || 64 ||

ಎನ್ನವಗುಣಗಳ | ನಿನ್ನು ನೀ ನೋಡದಲೆ
ಚೆನ್ನಮಲ್ಲೇಶ ಕೃಪೆಗೆಯ್ದು | ಕರುಣದಿ
ಎನ್ನ ಭವಬಂಧ ಪರಿಯಿತ್ತು || 65 ||

ಜಯ ನಿತ್ಯನಿರೂಪನೆ ಜಯ ಸತ್ಯಸದ್ಗುರುವೆ
ಜಯಭಕ್ತರರಸ ಅಘಹರನೆ | ಮದ್ಗುರುವೆ
ಜಯ ಎನ್ನ ಮನದ ತವನಿಧಿಯೆ || 66 ||

ಗುರು ಚೆನ್ನಮಲ್ಲೇಶ | ವರಕೃಪಾರಸವೆನ್ನ
ಶರೀರವನು ತುಂಬಿ ಪೊರಸೂಸೆ | ಯದಂರಿಂದ
ಬರೆದಿಹೆನು ಬಲ್ಲ ಪರಿಯಲಿ || 67 ||

ಯೋಗಾಂಗತ್ರಿವಿಧಿಯನು | ರಾಗದಿಂ ಬರೆದೋದೆ
ರೋಗಭವಬಾದೆ ಪರಿಯುವುದು | ಲಿಂಗದೊಳು
ಸಾಗಿ ಭವದಿಂದ ಮೆರೆಯುವರು. || 68 ||